# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 539

ಮಾನ್ಯ ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 20/02/2023

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಎಲ್ಲೆಲ್ಲಿ ಯಾತ್ರಿನಿವಾಸಗಳನ್ನು ನಿರ್ಮಿಸಲಾಗಿದೆ; ಪ್ರಸ್ತುತ ಅವುಗಳು ಯಾವ ಸ್ಥಿತಿಯಲ್ಲಿವೆ: ಯಾತ್ರಿನಿವಾಸಗಳನ್ನು ಯಾರಿಗೆ ವಹಿಸಲಾಗಿದೆ; ಖಾಸಗಿ ಸಂಸ್ಥೆಗಳಿಗೆ ನೀಡಲಾಗಿದೆಯೇ: ಅವುಗಳ ನಿರ್ವಹಣೆಯನ್ನು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ 05 ಯಾತ್ರಿನಿವಾಸ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡಿದ್ದು, ಅವುಗಳ ಸಂಪೂರ್ಣ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಲಾಗಿರುವ ಯಾತ್ರಿನಿವಾಸ/ಡಾರ್ಮಿಟರಿಗಳ ನಿರ್ವಹಣೆಯನ್ನು ಆಯಾ ಟ್ರಸ್ಟ್/ಮಠ/ದೇವಸ್ಥಾನ/ಸಂಸ್ಥೆಗಳಿಗೆ ವಹಿಸಿಕೊಡುವ ಬಗ್ಗೆ ಹೊರಡಿಸಿರುವ ಮಾರ್ಗಸೂಚಿಯನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |

ಸಂಖ್ಯೆ: ಟಿಓಆರ್ 62 ಟಿಡಿವಿ 2023

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ
ಪರಿಸರ ಸಚಿವರು

## ವಿ.ಪ ಪ್ರಶ್ನೆ ಸಂಖ್ಯೆ: 503 (539) ಕ್ಕೆ ಅನುಬಂಧ - 1

### ಹರಿಹರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಿರುವ ಯಾತ್ರಿ ನಿವಾಸ ಸಂಪೂರ್ಣ ವಿವರ.

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ಅನುಷ್ಠಾನ ಸಂಸ್ಥೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಕಾಮಗಾರಿಯ ಹಂತ | ನಿರ್ವಹಣೆಗೆ ವಹಿಸಿದ ಸ್ಥಳೀಯ ಸಂಸ್ಥೆಯ/ ಇಲಾಖೆಯ ವಿವರ |
|---|---|---|---|---|---|
| 1 | ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿ ಕರಿಬಸವೇಶ್ವರ ದೇವಾಲಯದ ಬಳಿ ಯಾತ್ರಿನಿವಾಸ | 2012-13 ಕೆ.ಆರ್.ಐ.ಡಿ.ಎಲ್ | 60.00 | ಕಾಮಗಾರಿ ಪೂರ್ಣಗೊಂಡಿದೆ | ತಾತ್ಕಾಲಿಕವಾಗಿ ಉಕ್ಕಡಗಾತ್ರಿ ಗ್ರಾಮ ಪಂಚಾಯಿತಿಗೆ ನಿರ್ವಹಿಸಿಕೊಂಡು ಹೋಗಲು ಸೂಚಿಸಲಾಗಿದೆ. |
| 2 | ಹರಿಹರ ನಗರದ ಹರಿಹರೇಶ್ವರ ದೇವಸ್ಥಾನದ ಸಮೀಪದಲ್ಲೇ ಇರುವ ಶ್ರೀ ರಾಘವೇಂದ್ರ ಬೃಂದಾವನ ಟ್ರಸ್ಟನ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ | 2014-15 ನಿರ್ಮಿತಿ ಕೇಂದ್ರ. | 50.00 | ಕಾಮಗಾರಿ ಪೂರ್ಣಗೊಂಡಿದೆ. | ತಾತ್ಕಾಲಿಕವಾಗಿ ಸದರಿ ಟ್ರಸ್ಟ್ ಮೂಲಕ ನಿರ್ವಹಿಸಲಾಗುತ್ತಿದೆ. |
| 3 | ಹರಿಹರ ತಾಲ್ಲೂಕಿನ ಕೊಮಾರನಹಳ್ಳಿ ಗ್ರಾಮದಲ್ಲಿ ಪ್ರವಾಸಿ ತಾಣಕ್ಕೆ ಯಾತ್ರಿ ನಿವಾಸ ನಿರ್ಮಾಣ. | 2015-16 ಕೆ.ಆರ್.ಐ.ಡಿ.ಎಲ್ | 45.38 | ಕಾಮಗಾರಿ ಪೂರ್ಣಗೊಂಡಿದೆ | ಇಲಾಖೆಗೆ ಹಸ್ತಾಂತರ ಆಗಿರುವುದಿಲ್ಲ, ನಿಯಮಾನುಸಾರ ಇಲಾಖೆಗೆ ಹಸ್ತಾಂತರವಾದ ನಂತರ ಮುಂದಿನ ಕ್ರಮವಹಿಸಲಾಗುವುದು. |
| 4 | ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಕೆರೆ ಪ್ರವಾಸಿ ತಾಣದ ಬಳಿ ಯಾತ್ರಿ ನಿವಾಸ ನಿರ್ಮಾಣ | 2015-16 ಕೆ.ಆರ್.ಐ.ಡಿ.ಎಲ್ | 45.38 | ಕಾಮಗಾರಿ ಪೂರ್ಣಗೊಂಡಿದೆ | ಕೊಂಡಜ್ಜಿಯಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ತಾತ್ಕಾಲಿಕವಾಗಿ ನಿರ್ವಹಿಸುತ್ತಿದ್ದಾರೆ. |
| 5 | ಹರಿಹರ ತಾಲ್ಲೂಕು, ಹೊಸಹಳ್ಳಿ ಗ್ರಾಮದ ಮಹಾಯೋಗಿ ಶ್ರೀ ವೇಮನಪೀಠ ಸಂಸ್ಥಾನ ಮಠದ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 2017-18 ಕೆ.ಆರ್.ಐ.ಡಿ.ಎಲ್ | 50.00 | ಕಾಮಗಾರಿ ಮುಕ್ತಾಯ ಹಂತದಲ್ಲಿದೆ. | ಕಾಮಗಾರಿ ಪೂರ್ಣಗೊಂಡ ನಂತರ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು. |

ಸರ್ಕಾರದ ಆದೇಶ ಸಂಖ್ಯೆ ಪ್ರಇ.116.ಪ್ರವಾಯೋ.2014 ದಿನಾಂಕ.24.07.2014ಕ್ಕೆ

ವಿಧಾನ ಸಭೆ ಪ್ರಶ್ನೆ ಸಂಖ್ಯೆ: 503 (539) ಕ್ಕೆ    ಅನುಬಂಧ-2

## ಪ್ರವಾಸೋದ್ಯಮ ಇಲಾಖೆಯ ಅನುದಾನದಿಂದ ನಿರ್ಮಿಸಿರುವ ಯಾತ್ರಿನಿವಾಸ ಮತ್ತು ಡಾರ್ಮಿಟರಿಗಳ ನಿರ್ವಹಣೆಯನ್ನು ಆಯಾ ಟ್ರಸ್ಟ್/ಮಠ/ದೇವಸ್ಥಾನ/ಸಂಸ್ಥೆಗಳಿಗೆ ವಹಿಸಿಕೊಡುವ ಬಗ್ಗೆ ಮಾರ್ಗಸೂಚಿಗಳು

1 ಪ್ರವಾಸೋದ್ಯಮ ಇಲಾಖೆಯ ಅನುದಾನದಲ್ಲಿ ನಿರ್ಮಿಸಿರುವ ಯಾತ್ರಿನಿವಾಸ/ಡಾರ್ಮಿಟರಿ ಸೌಲಭ್ಯಗಳನ್ನು ಯಥಾ ಸ್ಥಿತಿಯಲ್ಲಿ ನಿರ್ವಹಣೆಗಾಗಿ ವಹಿಸಿಕೊಡಲಾಗುವುದು.

2 ಸದರಿ ಸೌಲಭ್ಯವನ್ನು ಸಂಬಂಧಿಸಿದ ಟ್ರಸ್ಟ್/ಮಠ/ದೇವಸ್ಥಾನ/ಸಂಸ್ಥೆಗಳ ವತಿಯಿಂದ ಪ್ರವಾಸಿಗರು/ಯಾತ್ರಿಕರಿಗಾಗಿ ನಿರ್ವಹಿಸುವುದು. ಇವುಗಳನ್ನು ಗುತ್ತಿಗೆ/ಬಾಡಿಗೆ ಮೇಲೆ ಬೇರೆ ಯಾವುದೇ ಖಾಸಗಿ ವ್ಯಕ್ತಿ/ಸಂಸ್ಥೆಗಳಿಗೆ ವಹಿಸಿ ಕೊಡಬಾರದು ಮತ್ತು ಇಲ್ಲಿ ಉದ್ದೇಶಿತ ಚಟುವಟಿಕೆ ಹೊರತಾಗಿ ಇತರೆ ಚಟುವಟಿಕೆ ನಡೆಸಬಾರದು.

3 ಯಾತ್ರಿನಿವಾಸದ ಪ್ರತಿ ಕೊಠಡಿಗೆ ಹಾಗೂ ಡಾರ್ಮಿಟರಿಗಳಿಗೆ ಬಾಡಿಗೆ ನಿಗಧಿಪಡಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಸಮಿತಿ ರವರ ನಿರ್ಣಯವೇ ಅಂತಿಮವಾಗಿರುತ್ತದೆ. ಈ ರೀತಿ ನಿಗಧಿಪಡಿಸಿದ ಬಾಡಿಗೆಯನ್ನು ನಿರ್ವಹಣಾ ಸಂಸ್ಥೆಯು ಸೂಚನಾ ಫಲಕದಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

4 ಸೌಲಭ್ಯವನ್ನು ಪ್ರವಾಸಿಗರ/ಯಾತ್ರಿಕರ ಉಪಯೋಗದ ಹೊರತು ಬೇರೇ ಯಾವುದೇ ಉದ್ದೇಶಕ್ಕೂ ಬಳಸುವಂತಿಲ್ಲ.

5 ಕಟ್ಟಡದ ಮಾಸಿಕ ವಿದ್ಯುತ್. ನೀರಿನ ಬಳಕೆ ವೆಚ್ಚಗಳನ್ನು ಒಳಗೊಂಡಂತೆ ಇತರೆ ಎಲ್ಲಾ ವೆಚ್ಚಗಳನ್ನು ಆಯಾ ಟ್ರಸ್ಟ್/ಮಠ/ದೇವಸ್ಥಾನ/ಸಂಸ್ಥೆಗಳ ವತಿಯಿಂದ ಭರಿಸತಕ್ಕದ್ದು. ಇದಕ್ಕಾಗಿ ಇಲಾಖೆ ಯಾವುದೇ ವೆಚ್ಚವನ್ನು ಭರಿಸುವುದಿಲ್ಲ.

6 ಇಲಾಖೆಯ ಅನುದಾನದಲ್ಲಿ ನಿರ್ಮಿಸಿರುವ ಸೌಲಭ್ಯದ ಕಟ್ಟಡವನ್ನು ನಿರ್ವಹಣಾ ಸಂಸ್ಥೆಯು ಸುಸ್ಥಿತಿಯಲ್ಲಿ ಇಟ್ಟುಕೊಳ್ಳತಕ್ಕದ್ದು. ಸದರಿ ಸೌಲಭ್ಯದ ಭೌತಿಕ ಬದಲಾವಣೆ/ಮಾರ್ಪಾಟು ಮಾಡಲು ಪ್ರವಾಸೋದ್ಯಮ ಇಲಾಖೆಯ ಲಿಖಿತ ಪೂರ್ವಾನುಮತಿ ಪಡೆಯುವುದು ಅಗತ್ಯವಾಗಿರುತ್ತದೆ.

7 ನಿರ್ವಹಣಾ ಸಂಸ್ಥೆಗಳು ಕಟ್ಟಡದ ನಿರ್ವಹಣೆಯ ಬಗ್ಗೆ ಲೆಕ್ಕ ಪುಸ್ತಕವನ್ನು ನಿರ್ವಹಿಸುವುದು ಕಡ್ಡಾಯ. ಪ್ರತಿ ವರ್ಷ ನಿರ್ವಹಣಾ ಪುಸ್ತಕದ ಪ್ರತಿಯೊಂದಿಗೆ ವಾರ್ಷಿಕ ಲೆಕ್ಕ-ಪತ್ರಗಳನ್ನು ಸದಸ್ಯ ಕಾರ್ಯದರ್ಶಿಗಳು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ರವರ ಮುಖಾಂತರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಸಮಿತಿ ಯವರಿಗೆ ನೀಡತಕ್ಕದ್ದು.

8 ಪ್ರವಾಸಿಗರ ರಕ್ಷಣೆಗಾಗಿ ಟ್ರಸ್ಟ್/ಮಠ/ದೇವಸ್ಥಾನ/ಸಂಸ್ಥೆಗಳು ಎಲ್ಲಾ ಅವಶ್ಯಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

9 ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳು/ಸಿಬ್ಬಂದಿಗಳು ಯಾವಾಗ ಸಂದರ್ಭದಲ್ಲಿ ಸೌಲಭ್ಯದ ಚಟುವಟಿಕೆಗಳ ಬಗ್ಗೆ ತಪಾಸಣೆ ನಡೆಸಲು ಬಂದಾಗ ನಿರ್ವಹಣಾ ಸಂಸ್ಥೆಗಳು ಸಹಕರಿಸತಕ್ಕದ್ದು.

10 ಪ್ರವಾಸೋದ್ಯಮ ಇಲಾಖೆಯಿಂದ ಬರುವ ಗಣ್ಯರು ಹಾಗೂ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಆದ್ಯತೆ ಮೇಲೆ ಕೊಠಡಿಗಳನ್ನು ಕಾಯ್ದಿರಿಸತಕ್ಕದ್ದು,

11 ಪ್ರವಾಸೋದ್ಯಮ ಇಲಾಖೆಯಿಂದ ವಿವಿಧ ಸ್ಥಳಗಳಲ್ಲಿ ನಿರ್ಮಿಸಿರುವ ಯಾತ್ರಿನಿವಾಸ/ಡಾರ್ಮಿಟರಿಗಳನ್ನು 5 ಅಥವಾ 10 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ವಾರ್ಷಿಕ ರೂ.1000/- ಗಳಂತೆ ಗುತ್ತಿಗೆ ಮೊತ್ತವನ್ನು ವಿಧಿಸಿ, ಸದರಿ ಮೊತ್ತವನ್ನು ಒಂದೇ ಬಾರಿಗೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಮೂಲಕ ಪ್ರವಾಸೋದ್ಯಮ ಇಲಾಖೆಯ ಸ್ವೀಕೃತಿ ಲೆಕ್ಕಶೀರ್ಷಿಕೆ ಸಂಖ್ಯೆ: 1452-00-800-0-01-ಬಾಡಿಗೆ ಮತ್ತು ಇತರ ಬಾಬ್ತುಗಳು ಇದಕ್ಕೆ ಪಾವತಿಸತಕ್ಕದ್ದು. ಇಲಾಖೆಯು ನಿರ್ಮಿಸಿರುವ ಸೌಲಭ್ಯವನ್ನು ಸಂಬಂಧಿಸಿರುವ ನಿರ್ವಹಣಾ ಸಂಸ್ಥೆಗಳಿಗೆ ವಹಿಸಿಕೊಡುವ ಹಾಗೂ ಗುತ್ತಿಗೆ ಅವಧಿಯನ್ನು ಪುನರ್ ನವೀಕರಿಸುವ ಅಧಿಕಾರವನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಪ್ರತ್ಯಾಯೋಜಿಸತಕ್ಕದ್ದು.

12 ಕಟ್ಟಡಗಳ ನಿರ್ವಹಣೆ ಮತ್ತು ಯಾವುದೇ ತಕರಾರುಗಳು, ಅಡ್ಡಿ ಆತಂಕಗಳು ಇತ್ಯಾದಿಗಳನ್ನು ಸಂಬಂಧಿಸಿದ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಅಥವಾ ಜಿಲ್ಲಾ ಪ್ರವಾಸೋದ್ಯಮ ಸಮಿತಿ ಮುಖಾಂತರ ಪರಿಹರಿಸಿಕೊಳ್ಳತಕ್ಕದ್ದು.

ಮೇಲಿನ ಷರತ್ತುಗಳನ್ನೊಳಗೊಂಡ ಕರಾರು ಪತ್ರ/ಮುಚ್ಚಳಿಕೆಯನ್ನು ನಿರ್ವಹಣಾ ಸಂಸ್ಥೆಯು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ರವರಿಗೆ ಬರೆದುಕೊಡತಕ್ಕದ್ದು ಮತ್ತು ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಇಲಾಖೆಯು ನಿರ್ಮಿಸಿರುವ ಸೌಲಭ್ಯವನ್ನು ಹಿಂಪಡೆದು ಸರ್ಕಾರದ ನಿಯಮಾನುಸಾರ ಕ್ರಮ ವಹಿಸಲಾಗುವುದು.

(ಮೋಹನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ.
ಪ್ರವಾಸೋದ್ಯಮ ಇಲಾಖೆ